# 9. ಪಾಪ್‌ಕಾರ್ನ್

ನಮ್ಮ ರಾಜ್ಯದ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು, ರಾಮನಗರ ಮತ್ತು ತುಮಕೂರು ಜಿಲ್ಲೆಗಳ ಕೆಲವು ಪ್ರದೇಶದಲ್ಲಿ ಈ ಬೆಳೆಯನ್ನು ನೀರಾವರಿ ಆಶ್ರಯದಲ್ಲಿ ಬೆಳೆಯಲಾಗುತ್ತಿದೆ.

**ತಳಿಗಳು ಮತ್ತು ವಿಶೇಷ ಗುಣಗಳು**

| *ತಳಿಗಳು* | *ಬಿತ್ತನೆ ಕಾಲ* | *ಕಾಲಾವಧಿ (ದಿನಗಳು)* | *ಇಳುವರಿ (ಕ್ವಿಂ. / ಎ)* |
|---|---|---|---|
| ಅಂಬರ್ ಪಾಪ್‌ಕಾರ್ನ್ | ಮುಂಗಾರು (ಮೇ–ಜೂನ್) ಹಿಂಗಾರು (ಸೆಪ್ಟೆಂಬರ್–ಅಕ್ಟೋಬರ್) ಬೇಸಿಗೆ (ಜನವರಿ–ಫೆಬ್ರವರಿ) | 100–110 | ಧಾನ್ಯ, 14–16 ಮೇವು 3–3.5 ಟನ್ |

**ಬೇಸಾಯಕ್ಕೆ ಬೇಕಾಗುವ ಸಾಮಗ್ರಿಗಳು (ಎಕರೆಗೆ)**

| *ಸಾಮಗ್ರಿಗಳು* | *ಋಷ್ಟಿ* |
|---|---|
| ಬಿತ್ತನೆ ಬೀಜ (ಕಿ.ಗ್ರಾಂ) | 6 |
| ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ (ಟನ್) | 4 |
| **ರಸಾಯನಿಕ ಗೊಬ್ಬರಗಳು (ಕಿ.ಗ್ರಾಂ)** | |
| ಸಾರಜನಕ | 60 |
| ರಂಜಕ | 30 |
| ಪೊಟ್ಯಾಷ್ | 16 |
| **ಲಘು ಪೋಷಕಾಂಶ (ಕಿ.ಗ್ರಾಂ)** | |
| ಸತು | 4 |

**ಬಿತ್ತನೆ:** ಬೀಜವನ್ನು 2 ಅಡಿ ಅಂತರದ ಸಾಲುಗಳಲ್ಲಿ 8 ಅಂಗುಲ ಅಂತರದಲ್ಲಿ 2 ಅಂಗುಲಕ್ಕಿಂತ ಹೆಚ್ಚು ಆಳವಿಲ್ಲದಂತೆ ಬಿತ್ತುವುದು. ರಸಾಯನಿಕ ಗೊಬ್ಬರಗಳೆಲ್ಲವನ್ನು ಪೂರ್ತಿಯಾಗಿ ಬಿತ್ತನೆಗೆ ಮೊದಲೇ ಮಣ್ಣಿನಲ್ಲಿ ಬೆರೆಸುವುದು. ಮರಳು ಮಿಶ್ರಿತ ಮಣ್ಣಾದಲ್ಲಿ 30 ಕಿ.ಗ್ರಾಂ. ಸಾರಜನಕ ಪೂರ್ತಿ ರಂಜಕ ಮತ್ತು ಪೊಟ್ಯಾಷ್ ಒದಗಿಸುವ ಗೊಬ್ಬರಗಳನ್ನು ಬಿತ್ತನೆಗೆ ಮೊದಲು ಕೊಡುವುದು. ಉಳಿದ 30 ಕಿ.ಗ್ರಾಂ. ಸಾರಜನಕವನ್ನು ಬಿತ್ತನೆಯಾದ 25–30 ದಿವಸಗಳಲ್ಲಿ ಮೇಲುಗೊಬ್ಬರವಾಗಿ ಕೊಟ್ಟು ಸಾಲುಗಳನ್ನು ಏರುಹಾಕುವುದು. ಈ ಸಮಯದಲ್ಲಿ ಭೂಮಿಯಲ್ಲಿ ಸಾಕಷ್ಟು ತೇವಾಂಶವಿರಬೇಕು.

**ಅಂತರ ಬೇಸಾಯ, ಕಳೆ ನಿರ್ವಹಣೆ ಮತ್ತು ಸಸ್ಯ ಸಂರಕ್ಷಣೆ:** ನೀರಾವರಿ ಮುಸುಕಿನಜೋಳದ ಬೆಳೆಗೆ ಸೂಚಿಸಿರುವ ಕ್ರಮಗಳನ್ನು ಅನುಸರಿಸುವುದು.

**ಮುಖ್ಯವಾದ ಖರ್ಚಿಲ್ಲದ ಬೇಸಾಯ ಕ್ರಮಗಳು:**

- ಸರಿಯಾದ ಅಂತರದಲ್ಲಿ ಬಿತ್ತನೆ ಮಾಡುವುದು.
- ಬಿತ್ತನೆಗೆ 3 ವಾರಗಳ ಮೊದಲೇ ಕೊಟ್ಟಿಗೆ ಗೊಬ್ಬರ ಅಥವಾ ಕಾಂಪೋಸ್ಟ್ ಮಣ್ಣಿನಲ್ಲಿ ಬೆರೆಸುವುದು.

## ಪಾಪ್‌ಕಾರ್ನ್



## ಬೇಬಿ ಕಾರ್ನ್

